ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	152 (271)
ಸದಸ್ಯರ ಹೆಸರು	:	ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	22-09-2020
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ನಾಗಮಂಗಲ ಪಟ್ಟಣ ಪಂಚಾಯಿತಿ ಇತ್ತೀಚಿಗೆ ಪುರಸಭೆಯಾಗಿ ಮೇಲ್ದರ್ಜೆಗೆ ಏರಿರುವುದರಿಂದ ಪುರಸಭೆ ವ್ಯಾಪ್ತಿಗೆ ಒಳಪಡುವ ಪ್ರದೇಶ ವಿಸ್ತಾರವಾಗಿರುವುದರಿಂದ ಪುರಸಭೆ ವ್ಯಾಪ್ತಿಗೆ ಅಗತ್ಯ ಮೂಲ ಸೌಕರ್ಯಗಳಾದ ಯು.ಜಿ.ಡಿ, ರಸ್ತೆ, ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆ ಸರ್ಕಾರದ ಮುಂದೆ ಇದೆಯೇ; (ಇದ್ದಲ್ಲಿ ಈ ಯೋಜನೆಯ ವಿವರವಾದ ಮಾಹಿತಿ ನೀಡುವುದು)	**ಒಳಚರಂಡಿ ವ್ಯವಸ್ಥೆ:** ನಾಗಮಂಗಲ ಪುರಸಭೆ ವ್ಯಾಪ್ತಿಯಲ್ಲಿ ಸಮಗ್ರ ಒಳಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಲು ಅಂದಾಜು ಪಟ್ಟಿಯನ್ನು ರೂ.34.60 ಕೋಟಿಗಳಿಗೆ 2053 ವರ್ಷಕ್ಕೆ ಆಗಬಹುದಾದ 46707 ಜನಸಂಖ್ಯೆಗೆ ಅನುಗುಣವಾಗಿ ಯೋಜನೆಯನ್ನು ರೂಪಿಸಿದ್ದು, ಈ ಪ್ರಸ್ತಾವನೆಯು ಸರ್ಕಾರದ ಕಡತ ಸಂಖ್ಯೆ:ಯುಡಿಡಿ 6 ಯುಡಿಎಸ್ 2020(ಇ) ರಲ್ಲಿ ಪರಿಶೀಲನೆಯಲ್ಲಿರುತ್ತದೆ. **ನೀರು ಸರಬರಾಜು ವ್ಯವಸ್ಥೆ:** ನಾಗಮಂಗಲ ಪುರಸಭೆ ವ್ಯಾಪ್ತಿಯಲ್ಲಿ ಸಮಗ್ರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಹೇಮಗಿರಿ ಹತ್ತಿರವಿರುವ ಹೇಮಾವತಿ ನದಿಯಿಂದ ಕೈಗೊಳ್ಳಲು ಅಂದಾಜು ಪಟ್ಟಿಯನ್ನು ರೂ. 150.00 ಕೋಟಿಗಳಿಗೆ ತಯಾರಿಸಿ, ಸದರಿ ಯೋಜನೆಯನ್ನು 2053 ವರ್ಷಕ್ಕೆ ಆಗಬಹುದಾದ 46707 ಜನಸಂಖ್ಯೆಗೆ ದಿನಪ್ರತಿ ತಲಾ 135 ಲೀಟರ್ ಸರಬರಾಜು ಮಾಡಲು ಯೋಜಿಸಲಾಗಿದೆ. ಪ್ರಸ್ತುತ, ಸರ್ಕಾರದ ಪತ್ರದ ಸಂಖ್ಯೆ: ನಅಇ 7 ಯುಡಬ್ಲ್ಯೂಎಸ್ 2019 ದಿನಾಂಕ: 04-09-2019 ರಲ್ಲಿ ಸದರಿ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ಮುಂದಿನ ಆದೇಶದವರೆಗೆ ಯಾವುದೇ ಕ್ರಮ ಕೈಗೊಳ್ಳಬಾರದೆಂದು ಪ್ರಸ್ತಾವನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿಗೆ ಹಿಂದಿರುಗಿಸಲಾಗಿದೆ. **ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆ:** ನಾಗಮಂಗಲ ಪಟ್ಟಣ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಿರುವ ಹಿನ್ನೆಲೆಯಲ್ಲಿ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ರೂ. 550.00ಲಕ್ಷಗಳ ಹೆಚ್ಚುವರಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಹಂಚಿಕೆ ಮೊತ್ತದ ಪೈಕಿ ಶೇ.85ರಷ್ಟುಮೊತ್ತ ರೂ. 467.50ಲಕ್ಷಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕ್ರಿಯಾಯೋಜನೆಯಲ್ಲಿ ರೂ.86.83ಲಕ್ಷಗಳ ಕುಡಿಯುವ ನೀರಿನ ಕಾಮಗಾರಿಗಳು ಟೆಂಡರ್

ಪ್ರಕ್ರಿಯೆಯಲ್ಲಿವೆ. ರೂ.107.15ಲಕ್ಷಗಳ. ಒಳಚರಂಡಿ ಕಾಮಗಾರಿ ನಿರ್ವಹಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ, ಮಂಡ್ಯರವರಿಗೆ ಠೇವಣೀಕರಿಸಲಾಗಿದೆ.

ರೂ.112.67ಲಕ್ಷಗಳ ಪರಿಶಿಷ್ಟ ಜಾತಿ/ಪಂಗಡದ ಅನುದಾನದ ಕಾಮಗಾರಿಗಳು ಟೆಂಡರ್ ಪ್ರಕ್ರಿಯೆಯಲ್ಲಿದೆ. ರೂ. 160.85ಲಕ್ಷಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳು ಅನುಮೋದನೆಯಾಗಿದ್ದು, ಸದರಿ ಪ್ರದೇಶಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೇ ಇರುವುದರಿಂದ ರಸ್ತೆ ಕಾಮಗಾರಿಗಳನ್ನು ಕೈಬಿಟ್ಟು, ಚರಂಡಿ ಕಾಮಗಾರಿ ನಿರ್ವಹಿಸಲು ಪರಿಷ್ಕೃತ ಕ್ರಿಯಾಯೋಜನೆ ತಯಾರಿಸಿ, ಜಿಲ್ಲಾಧಿಕಾರಿಗಳ ಅನುಮೋದನೆಗೆ ಸಲ್ಲಿಸಲಾಗಿರುತ್ತದೆ.

<u>ಎಸ್.ಎಫ್.ಸಿ (ಕುಡಿಯುವ ನೀರು) ಯೋಜನೆ:</u>

ಮಂಡ್ಯ ಜಿಲ್ಲೆಯ ನಾಗಮಂಗಲ ಪುರಸಭೆಗೆ ಎಸ್.ಎಫ್.ಸಿ (ಕುಡಿಯುವ ನೀರು) ಯೋಜನೆಯಡಿ 2019-20ನೇ ಸಾಲಿನಲ್ಲಿ ರೂ.26.00 ಲಕ್ಷಗಳನ್ನು ಹಂಚಿಕೆ ಮಾಡಿ, ರೂ.26.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಮತ್ತು 2020-21ನೇ ಸಾಲಿನಲ್ಲಿ ರೂ.2.50 ಲಕ್ಷಗಳನ್ನು ಹಂಚಿಕೆ ಮಾಡಿ ರೂ.2.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

<u>ಸ್ವಚ್ಛ ಭಾರತ್ ಮಿಷನ್ :-</u>

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಸ್ವಚ್ಛ ಭಾರತ ಮಿಷನ್ ಅಡಿ ನಾಗಮಂಗಲ ಪುರಸಭೆಗೆ ವೈಯಕ್ತಿಕ ಶೌಚಾಲಯ ನಿರ್ಮಾಣ, ಸಾರ್ವಜನಿಕ/ ಸಮುದಾಯ ಶೌಚಾಲಯ ನಿರ್ಮಾಣ, ಘನತ್ಯಾಜ್ಯ ವಸ್ತು ವೈಜ್ಞಾನಿಕ ನಿರ್ವಹಣೆ ಮಾಡಲು ಯೋಜಿಸಲಾಗಿರುತ್ತದೆ. ಸದರಿ ಯೋಜನೆಯಡಿ ಈಗಾಗಲೆ 93 ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಲಾಗಿದೆ.

ಘನತ್ಯಾಜ್ಯ ನಿರ್ವಹಣೆಗಾಗಿ ಅಗತ್ಯವಿರುವ ವಾಹನ ಯಂತ್ರೋಪಕರಣಗಳ ಖರೀದಿ ಹಾಗು ಸಂಸ್ಕರಣಾ ಸೌಲಭ್ಯ ನಿರ್ಮಿಸಲು ಅಂದಾಜು ರೂ 541.33 ಲಕ್ಷಗಳ ಬಂಡವಾಳ ಮೊತ್ತದ ವಿಸ್ತೃತ ಯೋಜನಾ ವರದಿಗೆ (ಸ್ವಚ್ಛ ಭಾರತ್ ಮಿಷನ್)ರಾಜ್ಯ ಉನ್ನತಾಧಿಕಾರಿಗಳ ಸಮಿತಿ ಸಭೆಯು ಅನುಮೋದನೆ ನೀಡಿರುತ್ತದೆ. ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿ ಸಭೆಯು ಸದರಿ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಟೆಂಡರ್ ಪ್ರಕ್ರಿಯು ಜಾರಿಯಲ್ಲಿರುತ್ತದೆ. **ವಿವರ ಅನುಬಂಧದಲ್ಲಿರುತ್ತದೆ.**

ಆ)	ಈ ಯೋಜನೆಯನ್ನು ಅನುಷ್ಠಾನಗೊಳಸಲಾಗುವುದು ಯಾವಾಗ;	ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ಹೆಚ್ಚುವರಿಯಾಗಿ ಹಂಚಿಕೆಯಾಗಿರುವ ಮೊತ್ತದಲ್ಲಿ ಕುಡಿಯುವ ನೀರಿನ ಕಾಮಗಾರಿ, ಒಳಚರಂಡಿ ಮತ್ತು ರಸ್ತೆ & ಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಸಲು ಕಾರ್ಯ ಪ್ರಗತಿಯಲ್ಲಿರುತ್ತದೆ. **ಸ್ವಚ್ಛ ಭಾರತ್ ಮಿಷನ್ :-** ಎಸ್.ಬಿ.ಎಂ ಯೋಜನೆಯು 2ನೇ ಅಕ್ಟೋಬರ್ 2014 ರಿಂದ 31 ಮಾರ್ಚ್ 2021ರವರೆಗೆ ಚಾಲ್ತಿಯಿದ್ದು ಪ್ರಸ್ತುತ ಯೋಜನೆಯು ಅನುಷ್ಠಾನಗೊಳಸುವ ಹಂತದಲ್ಲಿರುತ್ತದೆ.
ಇ)	ಯಾವುದೇ ಯೋಜನೆ ಇಲ್ಲವಾದಲ್ಲಿ ಈ ಪುರಸಭೆ ವ್ಯಾಪ್ತಿಯ ಜನರಿಗೆ ಅಗತ್ಯ ಮೂಲ ಸೌಲಭ್ಯ ನೀಡುವಲ್ಲಿ ಸರ್ಕಾರದ ಮುಂದಿನ ಕ್ರಮಗಳೇನು;	ಹಾಲಿ ವ್ಯವಸ್ಥೆಯಿಂದ ಪಟ್ಟಣಕ್ಕೆ ದಿನಪ್ರತಿ ತಲಾ 70 ಲೀಟರ್ ನೀರು ಸರಬರಾಜು ಪೂರೈಸಲಾಗುತ್ತಿದೆ. ಹಾಲಿ ಪಟ್ಟಣದಲ್ಲಿ 54.45 ಕಿ.ಮೀ ಅಷ್ಟು ಒಳಚರಂಡಿ ಮಾರ್ಗವನ್ನು ಅಳವಡಿಸಿ, 3 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಲಾಗುತ್ತಿದೆ. ನಾಗಮಂಗಲ ಪಟ್ಟಣದಲ್ಲಿ 01 ತೇವಬಾವಿ ನಿರ್ಮಾಣ, ರೇಚಕ ಯಂತ್ರಗಳು ಮತ್ತು ಏರು ಕೊಳವೆ ಮಾರ್ಗ ಅಳವಡಿಕೆ ಮತ್ತು ಹೊಸದಾಗಿ ಸೇರ್ಪಡೆಯಾಗಿರುವ 14 ಹಳ್ಳಿಗಳಗೆ ಈಋಜು ತಾಂತ್ರಿಕತೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಸೇರಿ ಸಮಗ್ರ ಒಳಚರಂಡಿ ಯೋಜನೆಯನ್ನು ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ಒಟ್ಟಾರೆ ರೂ. 750.00 ಲಕ್ಷಗಳ ಪೈಕಿ ರೂ. 637.50 ಲಕ್ಷಗಳ ಮೊತ್ತದ ವಿವಿಧ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಒಳಚರಂಡಿ ಮತ್ತು ರಸ್ತೆ &ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಸಲು ಕ್ರಮವಹಿಸಲಾಗುತ್ತಿದೆ.
ಈ)	ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಿರುವುದರಿಂದ ಈ ಪಟ್ಟಣ ಪಂಚಾಯಿತಿಗೆ ಅಗತ್ಯ ಮೂಲ ಸೌಲಭ್ಯ ವಿಸ್ತರಿಸುವುದಕ್ಕೆ ಯೋಜನೆ ರೂಪಿಸಲಾಗಿದೆಯೇ? (ಯೋಜನೆಯ ಸಂಪೂರ್ಣ ವಿವರ ನೀಡುವುದು)	**ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆ:** ಬೆಳ್ಳೂರು ಪಟ್ಟಣ ಪಂಚಾಯಿತಿಗೆ ನಗರೋತ್ಥಾನ (ಮುನಿಸಿಪಾಲಿಟಿ)-3ನೇ ಹಂತದ ಯೋಜನೆಯಡಿ ರೂ. 500.00ಲಕ್ಷಗಳು ಹಂಚಿಕೆಯಾಗಿದ್ದು, ಸದರಿ ಅನುದಾನದ ಪೈಕಿ ರೂ.425.00ಲಕ್ಷಗಳ ಕ್ರಿಯಾಯೋಜನೆ ಅನುಮೋದನೆಯಾಗಿರುತ್ತದೆ. ರೂ.200.00 ಲಕ್ಷಗಳನ್ನು ಕ.ನ.ನೀ.ಸ ಮತ್ತು ಒ.ಚ.ಮಂಡಳ ವತಿಯಿಂದ ಅನುಷ್ಠಾನಗೊಳಸುವ ಕುಡಿಯುವ ನೀರಿನ ಕಾಮಗಾರಿಗಳಗೆ ಹಾಗೂ ಉಳದ ರೂ.225.00 ಲಕ್ಷಗಳಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಮೂಲಕ ಕ್ರಮವಹಿಸಲಾಗುತ್ತಿದೆ. **<u>14ನೇ ಹಣಕಾಸು ಆಯೋಗದ ಅನುದಾನ:</u>** ಬೆಳ್ಳೂರು ಪಟ್ಟಣ ಪಂಚಾಯಿತಿಗೆ 14ನೇ ಹಣಕಾಸು ಆಯೋಗದ ಅನುದಾನದಡಿ 2019-20ನೇ ಸಾಲಿನ ಸಾಮಾನ್ಯ ಮೂಲ ಅನುದಾನದಡಿ ರೂ. 131.08 ಲಕ್ಷಗಳನ್ನು ಬಿಡುಗಡೆಗೊಳಸಲಾಗಿದೆ. ಸದರಿ ಅನುದಾನದಡಿ ಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳಾದ ಮಳೆ ನೀರು ಚರಂಡಿ,

		ಬೀದಿ ದೀಪ, ಘನತ್ಯಾಜ್ಯ ವಸ್ತು ನಿರ್ವಹಣೆ, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ, ಕುಡಿಯುವ ನೀರು, ಸಾಮೂಹಿಕ ಶೌಚಾಲಯ/ಸ್ಮಶಾನ ಮತ್ತು ಚಿತಾಗಾರಗಳನ್ನು ಕೈಗೊಳ್ಳಲು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. **<u>15ನೇ ಹಣಕಾಸು ಆಯೋಗದ ಅನುದಾನ:</u>** 2020-21ನೇ ಸಾಲಿಗೆ ಬೆಳ್ಳೂರು ಪಟ್ಟಣ ಪಂಚಾಯಿತಿಗೆ 15ನೇ ಹಣಕಾಸು ಆಯೋಗದ ಅನುದಾನದಡಿ ಒಟ್ಟು ರೂ. 120.00 ಲಕ್ಷಗಳನ್ನು ಹಂಚಿಕೆ ಮಾಡಿ, ಮೊದಲನೆಯ ಕಂತಿನ ಅನುದಾನ ರೂ. 30.00ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಸದರಿ ಅನುದಾನದ ಶೇಕಡ 50 ರಷ್ಟು ಅನುದಾನವನ್ನು ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಸಮಾನವಾಗಿ ಬಳಸಲು ಹಾಗು ಉಳಿದ ಶೇಕಡ 50ರಷ್ಟನ್ನು ಇತರೆ ಮೂಲಭೂತ ಸೌಕರ್ಯಗಳಾದ ನೈರ್ಮಲ್ಯ ಮತ್ತು ಸೆಪ್ಟೇಜ್‌ಗಳ ನಿರ್ವಹಣೆ, ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳು, ಮಳೆ ನೀರು ಚರಂಡಿ, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ, ಬೀದಿ ದೀಪ / ವಿದ್ಯುತ್ ಉಳಿತಾಯ ಕ್ರಮಗಳು, ಉದ್ಯಾನವನ ಮತ್ತು ಹಸಿರು ಜಾಗ ಅಭಿವೃದ್ಧಿ, ಸ್ಮಶಾನ / ಚಿತಾಗಾರ ಕಾಮಗಾರಿಗಳಿಗೆ ಬಳಸಲು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. **<u>ಎಸ್.ಎಫ್.ಸಿ (ಕುಡಿಯುವ ನೀರು) ಯೋಜನೆ:-</u>** ಮಂಡ್ಯ ಜಿಲ್ಲೆಯ ಬೆಳ್ಳೂರು ಪಟ್ಟಣ ಪಂಚಾಯ್ತಿಗೆ ಎಸ್.ಎಫ್.ಸಿ (ಕುಡಿಯುವ ನೀರು) ಯೋಜನೆಯಡಿ 2019-20ನೇ ಸಾಲಿನಲ್ಲಿ ರೂ.12.00 ಲಕ್ಷಗಳನ್ನು ಹಂಚಿಕೆ ಮಾಡಿ, ರೂ.12.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ ಮತ್ತು 2020-21ನೇ ಸಾಲಿನಲ್ಲಿ ರೂ.2.50 ಲಕ್ಷಗಳನ್ನು ಹಂಚಿಕೆ ಮಾಡಿ ರೂ.2.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. **<u>ಸ್ವಚ್ಛ ಭಾರತ್ ಮಿಷನ್ :-</u>** ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿರುವ ನಗರಸ್ಥಳೀಯ ಸಂಸ್ಥೆಗಳಿಗೆ ಘನತ್ಯಾಜ್ಯ ನಿರ್ವಹಣೆಗಾಗಿ ಸೂಕ್ತ ಜಾಗ ಗುರುತಿಸಿ, ಘನತ್ಯಾಜ್ಯ ನಿರ್ವಹಣೆಗಾಗಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಯೋಜನೆ ಸಿದ್ಧಪಡಿಸಲು ನಿರ್ದೇಶನಾಲಯದ ಪತ್ರದ ಸಂಖ್ಯೆ: ಪೌನಿ:95:ಘವನಿ:2015-16, ದಿನಾಂಕ: 22-02-2016 ರೀತ್ಯಾ ಸೂಚನೆ ನೀಡಲಾಗಿರುತ್ತದೆ. ತ್ಯಾಜ್ಯ ಸಂಸ್ಕರಣೆ ಮಾಡಲು ಸೂಕ್ತ ಜಾಗ ಲಭ್ಯವಿಲ್ಲದ ಪಕ್ಷದಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ವಿಕೇಂದ್ರೀಕೃತ ತ್ಯಾಜ್ಯ ನಿರ್ವಹಣೆ ಘಟಕಗಳನ್ನು ಸ್ಥಾಪಿಸಿ ತ್ಯಾಜ್ಯ ನಿರ್ವಹಣೆ ಮಾಡಲು ಸೂಚನೆ ನೀಡಲಾಗಿರುತ್ತದೆ.

ಕಡತ ಸಂಖ್ಯೆ: ನಅಇ 293 ಎಸ್.ಎಫ್.ಸಿ 2020

(ಡಾ|| ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಮತ್ತು
ರೇಷ್ಮೆ ಸಚಿವರು